**ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

***ಸಿ.ಸಿ.ನಂ.1520/2024***

**ಫಿರ್ಯಾಧಿದಾರಃ** ಕರ್ನಾಟಕ ಸರ್ಕಾರದ ಪರವಾಗಿ ಚಿಂಚೋಳಿ ಪೋಲೀಸರು

// ವಿರುದ್ದ //

**ಆರೋಪಿತರು :** ಚೆನ್ನಪ್ಪ ಮತ್ತು ಇನ್ನೋಬ್ಬ

ದೋ ಷಾ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿತರು.

| | |
|---|---|
| 1. | ಚೆನ್ನಪ್ಪ ತಂದೆ ವೀರಶೆಟ್ಟಿ ದುಮಾನಿ ವಃ 46 ವರ್ಷ,<br>ವಾಸಃ ತುಮುಕುಂಟಾ, ತಾಃ ಚಿಂಚೋಳಿ. |
| 2 | ನವೀನಕುಮಾರ ತಂದೆ ಚೆನ್ನಪ್ಪ ದುಮಾನಿ ವಃ 22 ವರ್ಷ,<br>ವಾಸಃ ತುಮುಕುಂಟಾ, ತಾಃ ಚಿಂಚೋಳಿ. |

**ಆದ ನಿಮ್ಮ ವಿರುದ್ದ ದೋಷಿಸುವ ದೋಷಾರೋಪಣೆ ಎನೆಂದರೆ,**

ದಿನಾಂಕಃ 07-01-2024 ರಂದು ರಾತ್ರಿ 08-50 ಪಿ.ಎಮ್ ಗಂಟೆಗೆ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ತುಮಕುಂಟಾ ಗ್ರಾಮದಲ್ಲಿ ಚಾಸಾ-1 ಶ್ರೀನಿವಾಸ ನೇದ್ದವರು ತಮ್ಮ ಮನೆಯ ಮುಂದಿನ ಅಂಗಳದಲ್ಲಿ ನಿಂತಾಗ ಆರೋಪಿ ನೀವು ಏ ಸೂಳೆ ಮಗನೆ, ರಂಡಿ ಮಗನೇ, ನಿನಗೆ ಬಹಳ ಸೊಕ್ಕು ಆದ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ

ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-1 ಶ್ರೀನಿವಾಸ ನೇದ್ದವನಿಗೆ ಕಲ್ಲಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-4 ಕವಿತಾ ನೇದ್ದವಳಿಗೆ ಕೈಯಿಂದ ಬೆನ್ನಿಗೆ ಹೊಡೆದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-4 ನೇದ್ದಳಿಗೆ ಸೀರೆ ಹಿಡಿದೆಳೆದು ಅವಮಾನ ಮಾಡಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 354 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-1 ನೇದ್ದವರಿಗೆ ಮುಂದಿನ ಸಲ ನಿಮಗೆ ಖಲಾಸ

ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 28.03.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.